1	2	3	4	5
18	4202-03-102-0-03-386 ಬಂಡವಾಳ ವೆಚ್ಚ Capital Expenditure Indoor Stadium ಒಳಾಂಗಣ ಕ್ರೀಡಾಂಗಣ	100 00	100 00	50 00
	Grand Total	**1259 00**	**897 74**	**482 31**

972 (583) ಶ್ರೀ ಸುರೇಶ್ ಎನ್ ಮಾರಿಹಾಳ (ಕಿತ್ತೂರು) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಹುಬ್ಬಳ್ಳಿಯ ವಾ ಕ ರ ಸಾ ಸಂಸ್ಥೆಯಲ್ಲಿ ಅನುಕಂಪದ ಆಧಾರದ ಮೇಲೆ ಕಿರಿಯ ಸಹಾಯಕ ಹುದ್ದೆ ಭರ್ತಿ ಮಾಡುವುದನ್ನು ನಿಷೇಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು,

ಇ) ನದ್ಯಕ್ಕೆ ವಾ ಕ ರ ಸಾ ಸಂಸ್ಥೆಯಲ್ಲಿ ಖಾಲಿ ಇರುವ ಕಿರಿಯ ಸಹಾಯಕರ ಹುದ್ದೆಗಳ ಸಂಖ್ಯೆ ಎಷ್ಟು,

ಈ) ಕಿರಿಯ ಸಹಾಯಕರ ಹುದ್ದೆಗಳಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಕೋರಿ ಬಂದ ಅರ್ಜಿಗಳೆಷ್ಟು,

ಉ) ಸದರಿ ಹುದ್ದೆಗಳ ಭರ್ತಿ ಮಾಡುವ ಪ್ರಕ್ರಿಯೆ ಪುನಃ ಪ್ರಾರಂಭಿಸುವ ವಿಚಾರ ಸರ್ಕಾರಕ್ಕೆ ಇದೆಯೇ,

ಊ) ಹಾಗಿದ್ದಲ್ಲಿ, ಹುದ್ದೆಗಳ ಭರ್ತಿ ಮಾಡುವ ಪ್ರಕ್ರಿಯೆ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ

ಆ) ಸಂಸ್ಥೆಯ ವ್ಯಾಪ್ತಿಯ ವಿಭಾಗ ಮತ್ತು ಘಟಕಗಳಲ್ಲಿನ ದೈನಂದಿನ ಆಡಳಿತ ವ್ಯವಹರಣೆಯಲ್ಲಿ ಗಣಕಯಂತ್ರಗಳನ್ನು ಅಳವಡಿಸಲಾಗಿದೆ ಅಲ್ಲದೆ, ನಿರ್ವಾಹಕರಿಗೆ ಟಿಕೇಟು ವಿತರಣೆಗೆ ಎಲೆಕ್ಟ್ರಾನಿಕ್ ಟಿಕೆಟಿಂಗ್ ಯಂತ್ರಗಳನ್ನು ನೀಡಿರುವುದರಿಂದ ಇದಕ್ಕ ಸಂಬಂಧಪಟ್ಟ ಘಟಕದಲ್ಲಿನ ಕೆಲಸಗಳು ಗಣನೀಯವಾಗಿ ಕಡಿಮೆಯಾಗಿರುತ್ತವೆ ಇದಲ್ಲದೆ, ಸಿಬ್ಬಂದಿ ವೆಚ್ಚವನ್ನು ಕಡಿಮೆಗೊಳಿಸಲು ಸಿಬ್ಬಂದಿ ಅನುಪಾತವನ್ನು ಕಡಿಮೆ ಮಾಡುವುದು ಸಂಸ್ಥೆಯ

ಆರ್ಥಿಕ ದೃಷ್ಟಿಯಿಂದ ಅನಿವಾರ್ಯವಾಗಿದೆ ಆದುದರಿಂದ, ಕಿರಿಯ ಸಹಾಯಕ ಹುದ್ದೆ ಭರ್ತಿ ಮಾಡುವುದನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ

ಇ) 208

ಈ) 117

ಉ) ಮತ್ತು ಊ) ಅವಶ್ಯಕತೆ ಕಂಡುಬಂದಲ್ಲಿ ಮುಂದೆ ಭರ್ತಿ ಮಾಡುವುದನ್ನು ಪರಿಶೀಲಿಸಲಾಗುವುದು

973 (584) ಶ್ರೀ ಸುರೇಶ ಮಾರಿಹಾಳ (ಕಿತ್ತೂರ) ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಕಿತ್ತೂರ ಮತಕ್ಷೇತ್ರದ ಲೋಕೋಪಯೋಗಿ ಇಲಾಖೆ ರಸ್ತೆಗಳ ದುರಸ್ತಿಗೆ 12ನೇ ಹಣಕಾಸು ಯೋಜನೆಯಲ್ಲಿ ಹಣ ಮಂಜೂರು ಮಾಡಲು ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವಲ್ಲವೆ,

ಆ) ಹಾಗಿದ್ದಲ್ಲಿ, ಯಾವಾಗ ಹಣ ಮಂಜೂರು ಮಾಡಿ ಬಿಡುಗಡೆ ಮಾಡಲಾಗುವುದು (ರಸ್ತೆವಾರು ಮಾಹಿತಿ ನೀಡುವುದು)?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂದನ ಸಚಿವರು)

ಅ) 2006-07ನೇ ಸಾಲಿಗೆ ಲೆ ಶಿ 3054- (ಯೋಜನೇತರ) 12ನೇ ಹಣಕಾಸು ಕ್ರಿಯಾ ಯೋಜನೆಯಡಿ ಕಿತ್ತೂರ ವಿಧಾನ ಸಭಾ ಕ್ಷೇತ್ರದ ರಸ್ತೆ ಕಾಮಗಾರಿಗಳಿಗೆ ರೂ 27 80 ಲಕ್ಷ ಹಣ ಬಿಡುಗಡೆಯಾಗಿದೆ

ಆ) ವಿವರಗಳನ್ನು ಅನುಬಂಧ-1ರಲ್ಲಿ ಪಟ್ಟಿಯಲ್ಲಿ ಲಗತ್ತಿಸಿದೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ 584

ಅನುಬಂಧ-1

ಲೆಕ್ಕಶೀರ್ಷಿಕೆ 3054 12ನೇ ಹಣಕಾಸು ಯೋಜನೆಯಲ್ಲಿ ಕಿತ್ತೂರ ವಿಧಾನ ಸಭಾ ಕ್ಷೇತ್ರದ ರಸ್ತೆ ಕಾಮಗಾರಿಗಳಿಗೆ ನೀಡಲಾದ ಅನುದಾನ

(ರೂ ಲಕ್ಷಗಳಲ್ಲಿ)

1	ಬೈಲಹೊಂಗಲ-ಸಂಗೊಳ್ಳಿ-ಕಿತ್ತೂರ ರಸ್ತೆ ಕಿ ಮೀ 13 ರಿಂದ 16ರವರೆಗೆ ವಾರ್ಷಿಕ ನಿರ್ವಹಣೆ	1 00
2	ನದರ - ಕಿಮೀ 16 ರಿಂದ 18 ಮತ್ತು 23 ರಿಂದ 25 750 ವರೆಗೆ ವಾರ್ಷಿಕ ನಿರ್ವಹಣೆ	1 50